ದಿನಾಂಕಃ **16-11-2023** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎ ಎನ್ ಹೆಚ್ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ಅಂಶಗಳನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಹೇಳಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತದೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ದಾವೆಗೆ ಸಂಬಂಧಿಸಿದಂತೆ ಈ ಕೆಳಗಿನ ದಾಖಲಾತಿಗಳನ್ನು ಹಾಜರು ಮಾಡುತ್ತಿದ್ದು ಸದರಿ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಳ್ಳಲು ಕೋರುತ್ತೇನೆ.

1. ದೃಢೀಕೃತ ವಿಭಾಗ ಪತ್ರವನ್ನು ನಿಪಿ-1 ಮೂಲ ವಿಭಾಗ ಪತ್ರ ಕಳೆದು ಹೋಗಿರುವ ಕಾರಣದಿಂದ ದೃಢೀಕೃತ ನಕಲನ್ನು ನಿಶಾನೆಯಾಗಿ ಗುರುತಿಸಲು ಹಾಜರು ಪಡಿಸಿರುತ್ತೇನೆ.
2. ಉಪ ವಿಭಾಗ ಅಧಿಕಾರಿಯವರ ಆದೇಶವನ್ನು ನಿಪಿ 2 ಎಂದು ಗುರುತಿಸಲಾಯಿತು.
3. ಸ.ನಂ. 95/2, ಸ.ನಂ.127/1, ಸ.ನಂ. 95/2, ಸ.ನಂ. 95/3, ಸ.ನಂ. 95/4, ಸ.ನಂ.95/5, ಸ.ನಂ. 95/1(ಎ), ಸ.ನಂ. 95/1(ಬಿ) ಗೆ ಸಂಬಂಧಪಟ್ಟಿರುವ ಆರ್.ಟಿ.ಸಿ.ಗಳನ್ನು ನಿಪಿ-3 ರಿಂದ 10 ಎಂದು ಗುರುತಿಸಲಾಯಿತು.
4. ದಾವಾ ಆಸ್ತಿಗೆ ಸಂಬಂಧಪಟ್ಟಿರುವ ಕಂದಾಯ ಪಾವತಿ ಮಾಡಿರುವ ರಶೀದಿಯನ್ನು ನಿಪಿ-11 ಎಂದು ಗುರುತಿಸಲಾಯಿತು.
5. ಸ.ನಂ. 95/2 ಕ್ಕೆ ಸಂಬಂಧಪಟ್ಟಿರುವ ಕೈ ಬರಹದ 5 ಆರ್.ಟಿ.ಸಿ.ಗಳನ್ನು ಕ್ರಮವಾಗಿ ನಿಪಿ -12 ಎಂದು ಗುರುತಿಸಲಾಯಿತು.
6. ಸ.ನಂ. 95/2 ಕ್ಕೆ ಸಂಬಂಧಪಟ್ಟಿರುವ ಆಕಾರ ಬಂದನ್ನು ನಿಪಿ -13 ಎಂದು ಗುರುತಿಸಲಾಯಿತು.
7. ನಮ್ಮ ಕುಟುಂಬದ ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ-14 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಶ್ರೀ ಎ ಎನ್ ಹೆಚ್ ವಕೀಲರು ಕಾಲಾವಕಾಶವನ್ನು ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು,
ತಿಪಟೂರು.